


‘ಒಬ್ಬನೇ ಮಗ. ತನಗೆ ಮದುವೆ ಬೇಡ, ಸಂಸಾರ ಬಂಧನ ಬೇಡ. ಧರ್ಮ–ಅಧ್ಯಾತ್ಮ–ಮೋಕ್ಷದ ಮಾರ್ಗ ಬೇಕು ಎನ್ನುತ್ತಿದ್ದಾನೆ. ಒಬ್ಬ ಧಾರ್ಮಿಕ ಗುರು ಅವನ ಮನಸ್ಸನ್ನು ಕೆಡಿಸಿದ್ದಾನೆ. ಹಿಪ್ನೋಟೈಸ್ ಮಾಡಿ, ನನ್ನ ಮಗ ಸಂಸಾರಿಯಾಗಲು ಸಹಾಯ ಮಾಡಿ.

‘ನನಗೆ ಜನ್ಮ– ಜನ್ಮಾಂತರದಲ್ಲಿ ನಂಬಿಕೆ ಇದೆ. ಹಿಂದಿನ ಜನ್ಮಗಳಲ್ಲಿ ನಾನು ಏನೇನಾಗಿದ್ದೆ. ಮುಂದೆ ಯಾವ ಯಾವ ಜನ್ಮ ಬರಬಹುದು ಎಂದು ತಿಳಿಯುವ ಕೂತೂಹಲವಿದೆ. ಹಿಪ್ನೋಸಿಸ್ ಮಾಡಿದರೆ ಇವೆಲ್ಲ ತಿಳಿಯುತ್ತದಂತೆ ನಿಜವೇ?’

– ಹಿಪ್ನೋಸಿಸ್ ಬಗ್ಗೆ ಜನ ಸಾಮಾನ್ಯರಲ್ಲಿರುವ ನಂಬಿಕೆ ನಿರೀಕ್ಷೆಗಳಿವು. ‘ಹಿಪ್ನೋಥೆರಪಿ ಮಾಡಿ ಯಾವ ಕಾಯಿಲೆಯನ್ನಾದರೂ ವಾಸಿ ಮಾಡುತ್ತೇವೆ. ನಿಮ್ಮ ಹಿಂದಿನ ಜನ್ಮಗಳ ರಹಸ್ಯವನ್ನು ಬಿಚ್ಚಿಡುತ್ತೇವೆ’ ಎಂದು ನಿತ್ಯ ಟೀವಿಯಲ್ಲಿ ಪ್ರಚಾರ ಮಾಡುವವರು ಹಲವರು ಹುಟ್ಟಿಕೊಂಡಿದ್ದಾರೆ. ‘ಹಿಪ್ನೋಸಿಸ್‌ನಿಂದ ವ್ಯಕ್ತಿಯ ಅಂತರಾಳದ ರಹಸ್ಯಗಳನ್ನು ತಿಳಿಯಬಹುದು. ನಮ್ಮಲ್ಲಿಗೆ ಬನ್ನಿ’ ಎನ್ನುವ ಇವರ ಹೇಳಿಕೆಗಳಲ್ಲಿ ಎಷ್ಟು ಸತ್ಯವಿದೆ?

ಹಿಪ್ನೋಸಿಸ್ **(Hypnosis)** ಎನ್ನುವ ಪದವನ್ನು ಸೃಷ್ಟಿಸಿದವನು ಸ್ಕಾಟಿಶ್ ಶಸ್ತ್ರವೈದ್ಯನಾದ ಜೇಮ್ಸ್ ಬ್ರೇಯ್ಡ್ (1841). ಹಿಪ್ನೋಸಿಸ್ ಎಂದರೆ ಗ್ರೀಕ್ ಭಾಷೆಯಲ್ಲಿ ‘ನಿದ್ರೆ’ ಎಂದರ್ಥ. ಇದೊಂದು ನರಸಂಬಂಧಿ ನಿದ್ರೆ – **(Nervous Sleep)** ಎಂದು ಬ್ರೇಯ್ಡ್ ಹೇಳಿದ್ದಾನೆ. ಇದೊಂದು ನಿದ್ರೆಯೂ ಅಲ್ಲದ, ಎಚ್ಚರದ ಸ್ಥಿತಿಯೂ ಅಲ್ಲದ ಏಕಾಗ್ರತೆಯ ಮನೋಸ್ಥಿತಿ. ಈ ಸ್ಥಿತಿಯಲ್ಲಿ ವ್ಯಕ್ತಿ ವಿರಾಮ–ವಿಶ್ರಾಂತಿಯ ಅನುಭವ ಪಡೆಯುತ್ತಾನೆ. ಹಿಪ್ನೋಸಿಸ್ ಸ್ಥಿತಿಯಲ್ಲಿ ವ್ಯಕ್ತಿ ಒಂದು ವಿಶಿಷ್ಟವಾದ ಪ್ರಜ್ಞಾಸ್ಥಿತಿಯಲ್ಲಿದ್ದು ನಿರ್ದಿಷ್ಟ ವಸ್ತು, ವಿಷಯ ಅಥವಾ ಅನುಭವದ ಬಗ್ಗೆ ತನ್ನ ಮನಸ್ಸನ್ನು ಕೇಂದ್ರೀಕರಿಸುತ್ತಾನೆ. ಹೊರಗಿನ ಪ್ರಪಂಚದ ಅರಿವನ್ನು ಕಳೆದುಕೊಳ್ಳುತ್ತಾನೆ. ಆತನ ದೇಹ ನೋವು, ಸ್ಪರ್ಶಕ್ಕೆ ಪ್ರತಿಕ್ರಿಯಿಸುವುದಿಲ್ಲ. ಹಿಪ್ನೋಸಿಸ್ ಮಾಡುವಾತನ (ಸಮ್ಮೋಹಕನ) ಸಲಹೆ–ಸೂಚನೆ–ಆಜ್ಞೆಗಳನ್ನು, ಪರಿಣಾಮಗಳನ್ನು ಲೆಕ್ಕಿಸದೆ ಯಾಂತ್ರಿಕವಾಗಿ ಪಾಲಿಸುತ್ತಾನೆ. ನಿಯಂತ್ರಣವಿಲ್ಲದ ಮಾತು–ವರ್ತನೆಗಳನ್ನು, ಭಾವೋದ್ವೇಗಗಳನ್ನು ಪ್ರದರ್ಶಿಸುತ್ತಾನೆ. ಈ ಅವಧಿಯಲ್ಲಿ ತಾನು ತೋರಿದ ವರ್ತನೆ– ಪ್ರತಿಕ್ರಿಯೆಗಳು ಮತ್ತು ನಡೆದ ವಿದ್ಯಮಾನಗಳು ಅವನ ನೆನಪಿನಲ್ಲಿ ಉಳಿಯುವುದಿಲ್ಲ. ಉದಾಹರಣೆಗೆ ಪ್ರೌಢವ್ಯಕ್ತಿಗೆ ‘ನೀನೀಗ ನಾಲ್ಕು ವರ್ಷದ ಮಗುವಿನಂತೆ ಮಾತಾಡು ಹಾಗೂ ವರ್ತಿಸು’ ಎಂದರೆ ಹಾಗೆ ವರ್ತಿಸುತ್ತಾನೆ. ‘ನಿನ್ನ ತಂದೆ ತಾಯಿಯನ್ನು ಕೆಟ್ಟ ಪದಗಳಲ್ಲಿ ಬಯ್ಯಿ’ ಎಂದರೆ ಬಯ್ಯುತ್ತಾನೆ ‘ಬ್ಲೇಡಿನಿಂದ ನಿನ್ನ ಕೈಯನ್ನು ಕುಯ್ದುಕೋ’ ಎಂದರೆ ಕುಯ್ದುಕೊಳ್ಳುತ್ತಾನೆ. ಹಾಗೆ ಮಾಡಿದ್ದು ನೆನಪಿನಲ್ಲಿರುವುದಿಲ್ಲ.

ಸಮ್ಮೋಹಕನ ಮನಸ್ಸು ಹಿಪ್ನೋಸಿಸ್‌ಗೆ ಒಳಗಾದ ವ್ಯಕ್ತಿಯ ಮನಸ್ಸಿನ ಮೇಲೆ ಸ್ವಾಮ್ಯವನ್ನು ಸ್ಥಾಪಿಸುತ್ತದೆ. ಒಳಿತು ಕೆಡಕುಗಳನ್ನು ಯೋಚಿಸದೆ ವಿವೇಚನೆ ಇಲ್ಲದೆ ವ್ಯಕ್ತಿ ವರ್ತಿಸುವುದಲ್ಲದೆ. ತನ್ನ ಗುಟ್ಟು–ರಹಸ್ಯಗಳನ್ನು ಹೇಳಬಹುದು. ಸಮ್ಮೋಹಕನ ವಿಧೇಯ ಸೇವಕನಂತೆ ನಡೆದುಕೊಳ್ಳಬಹುದು.

## ಹಿಪ್ನೋಸಿಸ್‌ನ ಮೂಲ

ಜೇಮ್ಸ್ ಬ್ರೇಯ್ಡ್‌ನ ಹಿಪ್ನೋಸಿಸ್ ಮೂಲ ‘ಅನಿಮಲ್ ಮ್ಯಾಗ್ನೆಟಿಸಮ್’ ಎಂಬ ಸಿದ್ಧಾಂತವನ್ನು ಜಗತ್ತಿನ ಮುಂದಿಟ್ಟ ಆಸ್ಟ್ರಿಯನ್ ವೈದ್ಯ ಫ್ರಾನ್ಜ್ ಮೆಸ್ಮರ್ ಪ್ರಕಾರ, ಈ ಜಗತ್ತಿನಲ್ಲಿ ಒಂದು ಕಾಂತೀಯ ಬಲ **(Magnetic Force)** ಇದೆ. ಅದರಿಂದ ಕಾಯಿಲೆಗಳನ್ನು ಗುಣಪಡಿಸಬಹುದು. ರೋಗಿಯ

